

ಕಲಾಕೃತಿ: ಅಶೋಕ್ ಭೌಮಿಕ್

# ಚೌಕಟ್ಟುಗಳಾಚೆಗೆ...

ಚಿತ್ರಕಲೆ, ಸಂಗೀತ ಸೇರಿದಂತೆ ಸಾಹಿತ್ಯೇತರ ಕಲಾಪ್ರಕಾರಗಳನ್ನು ಅರ್ಥ ಮಾಡಿಕೊಳ್ಳಲು ಅಗತ್ಯವಾದ ಬರಹ-ಸಂದರ್ಶನಗಳನ್ನು 'ಮಯೂರ' ಆಗಾಗ ಪ್ರಕಟಿಸುತ್ತಿದೆ. ಈ ಸಂಚಿಕೆಯಲ್ಲಿರುವ, ದೇಶದ ಪ್ರಮುಖ ಕಲಾವಿದರಲ್ಲೊಬ್ಬರಾದ ಅಶೋಕ್ ಭೌಮಿಕ್ ಅವರ ಸಂದರ್ಶನ, ಚಿತ್ರಕಲೆಯ ಸೂಕ್ಷ್ಮಗಳನ್ನು ಸಹೃದಯಿಯೊಬ್ಬ ಅರ್ಥ ಮಾಡಿಕೊಳ್ಳಲು ನೆರವಾಗುವಂತಿದೆ. ಭಾರತದ ಚಿತ್ರ ಕಲಾವಿದರ ಬೆಳವಣಿಗೆಗೆ ಇರುವ ಚೌಕಟ್ಟುಗಳ ಕುರಿತ ಅಶೋಕ್ ಅವರ ಗ್ರಹಿಕೆಗಳು ಚರ್ಚೆಗೆ ಅವಕಾಶ ಕಲ್ಪಿಸುವಂತಿವೆ. ಕಲೆ ಮತ್ತು ಕಲಾವಿಮರ್ಶೆಗೆ ಸಂಬಂಧಿಸಿದ ಅವರ ಅಭಿಪ್ರಾಯಗಳು ಚಿತ್ರಕಲಾ ವಿದ್ಯಾರ್ಥಿಗಳಿಗೆ ಉಪಯುಕ್ತ.

ಅಶೋಕ್ ಭೌಮಿಕ್ ಅವರೊಂದಿಗಿನ ಮಾತುಕತೆಯಂತೆಯೇ, ಜ್ಞಾನಪೀಠ ಪ್ರಶಸ್ತಿಯ ಮೂಲಕ ಸುದ್ದಿಯಲ್ಲಿರುವ ಹಿಂದಿ ಬರಹಗಾರ ವಿನೋದ ಕುಮಾರ ಶುಕ್ಲ ಹಾಗೂ 'ಕಾವ್ಯಸಂಕ' ಅಂಕಣದಲ್ಲಿನ ಉಕ್ರೇನ್ ಕವಯಿತ್ರಿ ಐರಿನಾ ಶುವಾಲೊವಾ ಅವರ ಸಂದರ್ಶನಗಳು ಈ ಸಂಚಿಕೆಯ ವಿಶೇಷಗಳಾಗಿವೆ. ಕನ್ನಡ ಜಗತ್ತಿನಾಚೆಗಿನ ಬರಹಗಾರರು ಹಾಗೂ ಕಲಾವಿದರನ್ನು ಪರಿಚಯಿಸುವುದು 'ಮಯೂರ'ಕ್ಕೆ ಹೆಮ್ಮೆಯ ಸಂಗತಿ. ಈ ಸಂದರ್ಶನಗಳು ನಮ್ಮ ಬರಹಗಾರರು, ಕಲಾವಿದರು ಹಾಗೂ ಓದುಗರ ಸಂವೇದನೆಗಳನ್ನು ಮತ್ತಷ್ಟು ಸೂಕ್ಷ್ಮಗೊಳಿಸುತ್ತವೆ ಎನ್ನುವುದು ನಮ್ಮ ನಂಬುಗೆ.

ವಿಭಿನ್ನವಾದ ಕಥೆ, ಕವಿತೆ, ಪ್ರಬಂಧ, ಲೇಖನಗಳು ಈ ಸಂಚಿಕೆಯಲ್ಲಿವೆ. ಈ ಎಲ್ಲ ಬರಹಗಳ ಉದ್ದೇಶ ಇಷ್ಟೇ: ಸಹೃದಯರ ನಿರೀಕ್ಷೆಯ ಮಟ್ಟವನ್ನು ಮುಟ್ಟಲು ಪ್ರಾಮಾಣಿಕ ಪ್ರಯತ್ನ ನಡೆಸುವುದು.

**ಮಯೂರ ಬಳಗ**

editormy@mayura.co.in